ಬಂದ. ಕೈಗೆ ಚೀಟಿ ಕೊಟ್ಟ. ಸಹಸ್ರಬಾಂಬುಗಳು ಮತ್ತೆ ಸಿಡಿದವು. ಅಗ್ನಿ ಪರ್ವತದ ಲಾವಾರಸ ಉಕ್ಕಿಹರಿಯಿತು.

ಗೆಳೆಯ,

ಕ್ಷಮಿಸಿರಿ. ನಾನು ಎರಡು ದಿನಗಳಿಂದಲೂ ರಾತ್ರಿ ಎಲ್ಲಾ ಒದ್ದಾಡಿ ಬಿಟ್ಟೆ. ನೀವೇನೋ ಉದಾರವಾಗಿ, ಅಮರ ಪ್ರೀತಿಯೆಂಬಂತೆ ಮದುವೆಯಾಗಬಹುದು. ನಾನು ಹಳೆಯದನ್ನು ಮರೆತು... ಸದಾ ನನ್ನ ಮಗನ ಮುಖ ನೋಡುತ್ತಾ ನಿಮ್ಮ ಜೊತೆಗೆ ಇರುವುದು ಕಷ್ಟ ಎನಿಸುತ್ತಿದೆ. ನನಗೆ ಈ ದ್ವಿಮುಖತೆಯಲ್ಲಿ ನರಳುವ ಚೈತನ್ಯ ಇಲ್ಲ ಎನಿಸುತ್ತಿದೆ. ಸಹಜವಾಗಿಯೇ ಬದುಕು ಕಷ್ಟವೂ ಕ್ಲಿಷ್ಟವೂ ಆಗಿದೆ. ಇನ್ನು ಅಸರಾಂಟದ ಕುದುರೆ ಏರಲು ಮನಸ್ಸು ಒಪ್ಪುತ್ತಿಲ್ಲ...

ದೀಪಾಲಿ ಮತ್ತೆ ನನ್ನ ಬದುಕಿನಲ್ಲಿ ದೀಪ ಆರಿಸಿಬಿಟ್ಟಳು.

ಈ ಪುಟ್ಟ ಹೃದಯವನ್ನು ಕುಕ್ಕಿ ಕುಕ್ಕಿ ಮತ್ತೆ ಗಾಯ ಮಾಡಿದಳು.

ಕತ್ತಲು ಕವಿಯಿತು. ಸಾಕು. ಮತ್ತೆ ಮತ್ತೆ ಬದುಕಿನಲ್ಲಿ ಪಾಠ ಕಲಿಯುವುದು ಬೇಡ. ಕಲಿತಿದ್ದೇ ಕಲಿಯುವುದು. ಸಾಕು, ಸಾಕು ಎಂದರೆ ಬೇರೇ ಬೇಕು.

ಊರಿಗೆ ಹೊರಟು ಬಿಟ್ಟೆ ರಾಜೀನಾಮೆ ಕೊಟ್ಟು.

ನಾನು ಹುಟ್ಟಿದ ಮನೆ ಹಾಳಾಗದಂತೆ ನೋಡಿಕೊಳ್ಳಬೇಕು, ಹಾಳಾದ ಹೊಲವನ್ನು ಮತ್ತೆ ಬಿತ್ತಿ ಬೆಳೆಯಬೇಕು...

## ಜಯಪ್ರಕಾಶ ಮಾವಿನಕುಳಿ

ಕವಿ, ಕಾದಂಬರಿಕಾರ, ವಿಮರ್ಶಕ, ಸಂಪಾದಕ, ಆಕಾಶವಾಣಿಯ ಧ್ವನಿ ಕಲಾವಿದ, ನಾಟಕಕಾರ, ರಂಗ ನಿರ್ದೇಶಕ ಮತ್ತು ರಂಗಭೂಮಿ ಮತ್ತು ಚಲನಚಿತ್ರ ನಟ ಹೀಗೆ ಹಲವು ರಂಗಗಳಲ್ಲಿ ಕಥೆಗಾರ ಮಾವಿನಕುಳಿ ಗುರುತಿಸಿಕೊಂಡಿದ್ದಾರೆ. ಅವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕರ್ಕಿಕೊಪ್ಪದವರು. ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತರು. 'ಶೇಪಾಲಿಕಾ', 'ನಿರಾಕರಣ', 'ಪಾರ್ಟಿ', 'ಮಹಾಯಾತ್ರೆ', 'ಕೊಡೆಯಪ್ಪನ ಕಥಾಪ್ರಸಂಗ', 'ರೂಪಾಂತರ', 'ಅಕಬರ', 'ಅಭಿಯಾನ', 'ಜಯಭಾರತಿ' ನಾಟಕಗಳು. 'ಸಾಗರದಲ್ಲಿ ಸಾಯಂಕಾಲ', 'ಅಶ್ವತ್ಥಾಮ', 'ವಿರಹ ಕಡಲು' ಕವನ ಸಂಕಲನಗಳು. 'ಕಾಲ', 'ಮುಖಗಳು', 'ಹೆಜ್ಜೆ ಮೂಡದ ಹಾದಿಯಲ್ಲಿ', 'ಚಂದಿರನೇತಕೆ ಓಡುವನಮ್ಮ', 'ಬ್ರಹ್ಮರಾಕ್ಷಸ' ಕಥಾ ಸಂಕಲನಗಳು. 'ಅಂತರ' ಅವರ ಕಾದಂಬರಿ.